## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಒದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಸಂಕೇಶ್ವರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ

ನಡೀತಿದ್ವು. ವರ್ಸಕ್ಕೊಮ್ಮಿ ಶಂಕರಲಿಂಗ ಜಾತ್ರಿ ನಡೀತೇತಿ. ಫೆಬ್ರವರಿ ತಿಂಗಳಿನ್ಯಾಗ ರಥಸಪ್ತಮಿ ದಿನಾನಅಅ ತೇರ ಎಳ್ಯೂದು. ಶಂಕರಲಿಂಗ ಗುಡೀಂದ ಬನಶಂಕರಿ ಗುಡೀತನಾ ತೇರ ಎಳೀಬೇಕು. ಈ ಹಾದಿ ಏರಕಲ್ಯಾಗ ಇದ್ರೂ ತೇರ ಓಡಿ ಬಂದಾಂಗ ಬರ್ತೇತಿ! ಆದ್ರ ಮಳ್ಳಾ ಮರದಿನಾ ಇಳಕಲ್ಯಾಗ ಹಾದಿ ಇದ್ರೂ ತೇರ ಅಗದೀ ಸಾವಕಾಶ ಹೋಕ್ಕೇತಿ ಅಂತ ಮಾತಾಡೋದು ಅಗದೀ ಸಹಜೀಕ.

ಹೀಂಗ ಹೊಳ್ಳಿ ಹೋಗೋ ದಿವಸನಅಅ ‘ಭರ ಜಾತ್ರಿ’ ಅಂತ ಠರಾವು ಆಗೇತಿ. ಅಂದಂತೂ ಊರ ಮಂದಿ ಅಲ್ದಅಅ ಸುತ್ತೂ ಕಡಿ ಹಳ್ಳಿ ಮಂದಿ ಕೂಡಿ ಗರ್ದಿ ಆಗಿ ಜಾತ್ರಿ ಝುಗ್ ಝುಗ್ ಅಂತಿರ್ತೇತಿ. ಜಾತ್ರ್ಯಾಗ ನಾಟಕ, ಜೀಕ, ತೊಟ್ಲಾ, ಅಟಿಕಿ ಸಾಮಾನಿನ ಅಂಗಡಿ, ಬೆಂಡ ಬೆತ್ತಾಸ, ಬಳಿ, ಭಾಂಡೆ, ಕೊಡಾ, ಅರಿವಿ, ಚಪ್ಪಲ್ಲ, ಐಸ್ಕ್ರೀಮ್, ಕೋಲ್ಡ್ ಡ್ರಿಂಕ್ಸ್, ಫೋಟೊ ಸ್ಟುಡಿಯೊ ಎಲ್ಲಾ ನಮೂನಿ ಅಂಗಡಿ ತುಂಬಿರ್ತಾವು. ಬೆಂಡ ಬತ್ತಾಸ, ಬೆಲ್ಲದಾಗ ಮಾಡಿದ್ದ ಮೇವೆ, ಪೇಡೆ, ಕರದಂಟ, ಚುಮ್ಮರಿ, ಸೇವ್ ಚೂಡಾ ವ್ಯಾಪಾರ ಅಂತೂ ಜೋರ್ದಾರ್ ಆಗೋದು. ಜಾತ್ರಿ ದಿವಸ ಹೋಳ್ಗಿ ಅಡಿಗಿ ಮಾಡಿ ಸುತ್ತೂ ಕಡೆ (ಶಂಕರಲಿಂಗ, ದತ್ತಾತ್ರೇಯ, ಬನಶಂಕರಿ, ಹನುಮಪ್ಪ, ಹೊಳೆವ್ವ, ವಿಠ್ಠಲ, ಬಸವಣ್ಣ, ದುರದುಂಡೆಪ್ಪ) ದೇವ್ರಿಗಿ ನಿವದಿ (ನೈವೇದ್ಯ) ಕೋಡೋದಂದ್ರ ಒಂದು ಭಾರಿ ಖುಷಿ.

ಗಣೇಶ್ ಚೌತಿ ಹಬ್ಬ ಅಂತೂ ನಮ್ಮೂರಾಗ ಏಕದಂ ಜೋರ್. ಒಂದ ಕಾಲಕ್ಕ ನಮ್ಮೂರಾಗಿನ ಸಾರ್ವಜನಿಕ ಗಣಪತಿ ಅಂದ್ರ ಸುತ್ತೂ ಕಡಿ ಹಳ್ಳಿ ಅಷ್ಟಅಅ ಅಲ್ದ ಬೆಳಗಾವಿ, ಗೋಕಾಕ, ಚಿಕ್ಕೋಡಿ, ನಿಪ್ಪಾಣಿ, ಕೊಲ್ಲಾಪುರ ಕಡೀಂದ ಮಂದಿ ಜಾತ್ರಿ ಹಂಗ ಬರತಿದ್ರು. ಊರಾಗ ಹನ್ನೊಂದ ದಿನ ಎಂದೂ ರಾತ್ರೀನ ಆಗತಿದ್ದಿಲ್ಲ; ಯಾರೂ ಮಲಕೋತಿರಲಿಲ್ಲ! ಬೆಳ್ಳ ಬೆಳತನ ಎಲ್ಲಿ ನೋಡಿದಲ್ಲಿ ಮಂದ್ಯಅಅ ಮಂದಿ. ರಾತ್ರಿ ಒಂಬತ್ತರಿಂದ ಹನ್ನ್ಯಾಡ, ಸರ್ವತ್ಯಾಗ ಹನ್ನ್ಯಾಡ್ರಿಂದ ನಸಕ್ಯಾಗ ಮೂರರ ತನಾ ಸಿನೇಮಾ ಆಟ ಚಾಲೂ ಇರೋವು. ರಾಜ್ಕುಮಾರ್ ಸಿನೇಮಾ ಅಂದ್ರ ಒಂದ ಹಬ್ಬನಅಅ. ಇನ್ನೊಂದು ಗಣಪತಿ ಹಬ್ಬದ ಸ್ಪೆಷಲ್ ಅಂದ್ರ ನಮ್ಮೂರ ನೀಲಗಾರ ಗಣಪತಿ. ಸಂಕೇಶ್ವರದ ಹೆದ್ದೂರಶೆಟ್ಟಿ ಮನೆತನದಾಗ ಒಂದ ಕಾಲಕ್ಕ ಕಡಕ್ ಕೆಂಪು ಬಣ್ಣದ ಗಣಪತಿ ಇಡತಿದ್ರು. ಬರ್ತಾ ಬರ್ತಾ ಅವರ ಅದನ್ನ ಸಾರ್ವಜನಿಕ ಪ್ರದರ್ಶನಕ್ಕ ಇಡಾಕ ಸುರು ಮಾಡಿದ್ರು. ಆ ಗಣಪತಿ ಇಪ್ಪತ್ತೊಂದ ದಿನಾ ಇರೋದು. (ಈಗೂ ಇಪ್ಪತ್ತೊಂದ ದಿವಸನ ಇರ್ತೇತಿ.) ಅದನ್ನ ನೋಡಾಕಂತ ಮಂದಿ ಬರೋದಕ್ಕ ಲೆಕ್ಕಾನ ಇಲ್ಲ. ಎರಡ ಕಿಲೋಮೀಟರ್ ಪಾಳಿ ಇರತೇತಿ ಅಂದ್ರ ನೀಂವಅಅ ಅಂದಾಜ ಕಟ್ರಿ. ಆಗಂತೂ ಹುಬ್ಬಳ್ಳಿ, ಧಾರವಾಡ, ವಿಜಯಪುರ, ಬಾಗಲಕೋಟ, ಕೊಲ್ಲಾಪುರ, ಪೂನಾ, ಮುಂಬೈ ಇಂಥಾ ಶಹರಗಳಿಂದ ಮಂದಿ ಬರೋದಲ್ದ ನಿದ್ದಿಗೆಟ್ಟ ಬೆಳತನಾ ಪಾಳಿ ಹಚ್ಚಿ ಗಣಪತಿ ದರ್ಶನಾ ತುಗೋತಾರ ಅಂದ್ರ ಅದೇನ ಹಗರ ಮಾತಲ್ಲ. ದರ್ಶನಾ ಮಾಡ್ಕೊಂಡ ಬಂದಾವ್ರು ನೀಲಗಾರ ಗಣಪತಿಗಿ ಪೇಡೆ ನಿವದಿ ಹಿಡಿತಾರು. ಹಿಂಗಾಗಿ ಇಪ್ಪತ್ತೊಂದ ದಿವಸ ನಮ್ಮೂರಾಗ ಪೇಡೆ ಟನ್ನಗಟ್ಟಲೇ ಮಾರಾಟ ಆಗೋದ ಅಂತೂ ನಕ್ಕಿ.

ನಮ್ಮೂರ ರಾಜಕಾರಣ ರಾಜ್ಯ ಮಟ್ಟದಾಗನ ಫೇಮಸ್ ಆಗಿದ್ದ ದಿನಗೋಳು ಇದ್ದು (ಇದ್ವು). ಅಪ್ಪಣ್ಣಗೌಡರು ಆಗಿನ ಸಂಸ್ಥಾ ಕಾಂಗ್ರೆಸ್ ಲೀಡರ್. ಭಾಳಂದ್ರ ಭಾಳ ಸಂಭಾಯಿತ ಮನಷಾ. ಸೀದಾ ಸಾದಾ. ಕಾಂಗ್ರೆಸ್ ಹವಾದಾಗನೂ ಅವರು ಕಾಂಗ್ರೆಸ್ ಸೋಲಿಸಿ ಆರಿಸಿ ಬಂದಿದ್ದ ಒಂದು ರಿಕಾರ್ಡ್ ಆಗಿ ಹೋತು. ನಮ್ಮೂರಿಗಿ ಇಲೆಕ್ಷನ್ ಪ್ರಚಾರಕ್ಕ ಇಂದಿರಾ ಗಾಂಧಿ, ಚಂದ್ರಶೇಖರ, ಜಗನ್ನಾಥರಾವ ಜೋಶಿ, ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ್, ಮಧು ಲಿಮಯೆ ಇಂಥಾ ಭಾರಿ ಭಾರಿ ಲೀಡರ್ಗೋಳು ಬಂದು ಹೋಗಿದ್ದ ನೆಪ್ಪ ಇನ್ನೂ ಹಂಗಅಅ ಐತಿ.

ಐದ ಕಿಲೋಮೀಟರ್ ದೂರದಾಗ ನಿಡಸೋಶಿ ಊರಾಗ ದುರದುಂಡೆಪ್ಪನ ಮಠಕ್ಕ ನಡಕೋಳೋದ ಅಂದ್ರ ನಮ್ಮೂರ ಸಂಕೇಶ್ವರ ಯಾವಾಗನೂ ಮುಂದನಅಅ. ಅಮಾಸಿಗೊಮ್ಮೆ ಅಲ್ಲಿ ಹೋಗಿ ಸ್ವಾಮಿಗೋಳಿಗಿ ಪಾದಕ್ಕ ಬಿದ್ದ ದುರದುಂಡೆಪ್ಪನ ದರ್ಶನಾ ತುಗೊಂಡ, ಹೋಳಿಗಿ ನಿವದಿ ಕೊಟ್ಟು ಕಾಯಿ ಕಪ್ರಾ ಮಾಡಿ ಮನಿಗೆ ಬಂದು ಹೋಳಿಗಿ ಊಟಾ ಮಾಡೋದು ಖುಷೀನ ಬ್ಯಾರೆ! ಸಂಕ್ರಾಂತ್ಯಾಗ ಅಮ್ಮಣಗಿ ಮಲ್ಲಯ್ಯಗ ಹೋಗಿ ಅಲ್ಲ್ಯೂ ಹೋಳಿಗಿ ನಿವದಿ ಕೊಟ್ಟ ಬುತ್ತಿ ಉಂಡ ಎಳ್ಳು ಬೆಲ್ಲ ಬೀರಕೋತ ಹೊಳ್ಳಿ ಬರೋದೇನ ಮಸ್ತ್ ಅಂತೇರಿ?!

ಕಾರ ಹುಣ್ಣಿವ್ಯಾಗ ಹೋರಿಗೋಳ ಕರಿ ಹಾರಸೋದಂದ್ರ ನಮ್ಮ ರೈತಾಪಿ ಮಂದಿಗಿ ಜಬರ್ದಸ್ತ್ ಖುಷಿ! ಹೋರಿಗೋಳಿಗಿ ಮೈ ತುಂಬಾ ಕ್ಯಾಂವಿ ಬಳದು ಕೊಂಬಿಗಿ ರಿಬ್ಬನ್ ಕಟ್ಟಿ ಕೈಯ್ಯಾಗ ಹೊಸ ನೂಲಿನ ಹಗ್ಗಾ ಹಿಡ್ಕೊಂಡು ತಲಿ ಮ್ಯಾಲ ರುಮಾಲ ಸುತ್ಕೊಂಡ ಹೊಂಟ್ರ ಅಂದ್ರ ಅವ್ರನ್ನ ಹಿಡ್ಯಾವ್ರ ಯಾರು? ಯಾಂವರೆ ಒಬ್ಬ ರಾಜಾ ಕುದ್ರಿ ಹತ್ತಿ ಹೊಂಟಾಂಗ ಆಗೋದು. ಇಡೀ ಜಿಲ್ಲಾದಾಗ ನಮ್ಮೂರ ದನದ ಪ್ಯಾಟಿ ಅಂದ್ರ ಫೇಮಸ್. ಹೂಡೋ ದನಗೋಳು, ಹಿಂಡೋ ದನಗೋಳು, ಶರ್ತಿನ ಹೋರಿಗೋಳು, ಜಾತಿ ಎಮ್ಮಿಗೋಳು, ಕುರಿ, ಆಡ, ಕೋಳಿ, ಕುದುರಿ, ಕತ್ತಿ ಎಲ್ಲಾ ತುಂಬಿ ಹೋಗೋದು. ಹೋರಿಗೋಳ ಓಡಿಸೋ ಶರ್ತ ನಡೀತಿತ್ತು. ಈ ಶರ್ತ ನೋಡಾಕ ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದ ರೈತೇಕಿ ಮಂದಿ ಹುಚ್ಚೆದ್ದು ಟಾವೆಲ್ ಹಾರಿಸ್ಕೋತ ಬರಾವ್ರು. ಕುಸ್ತಿಗಂತೂ ನಮ್ಮೂರ ಯಾವಾಗನೂ ಮುಂದ. ಕುಸ್ತಿ ಕಣಕ್ಕ ದಾರಾಸಿಂಗ್ ಸತ್ಪಾಲ್ ಚಂಬಾ ಮುತ್ನಾಳರಂಥ ಪೈಲ್ವಾನ್ರೆಲ್ಲಾ ಇಲ್ಲಿ ಬಂದ ಹೋಗ್ಯಾರು ಅಂದ್ರ ನೀಂವ ಇಲ್ಲಿ ಕುಸ್ತಿ ಕಣದ್ದ ಮಹತ್ವ ಕಳಾ ಕಟ್ರಿ.

ಸಂಕೇಶ್ವರ ಶಂಕರಲಿಂಗ ಸಕ್ಕರಿ ಕಾರ್ಖಾನೆ ಈ ಮೂರೂ ಹೆಸರಿನೊಳಗ ಇರೋ ತಾಳಮೇಳ ನೋಡಿದ್ರ ನಮ್ಮೂರ ಮ್ಯಾಲ ನಮಗ ಧಿಮಾಕ ಇದ್ರ ಅದ ನಮ್ಮ ತಪ್ಪಲ್ಲ!

ಚಿತ್ರಗಳು: ಸುರೇಶ ಮಂಜರಗಿ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ ‘ಚೆನ್ನುಡಿ’ ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್–
**editorsu@sudha.co.in**

